ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

27

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 1-12-20

# ಗಾಯಗೊಂಡಿದ್ದ ಸದಸ್ಯೆಗೆ ಗರ್ಭಪಾತ

## ಚುನಾವಣೆ ವೇಳೆ ನೂಕಿದ ಪ್ರಕರಣ । ಕಾನೂನು ಹೋರಾಟಕ್ಕೆ ಮುಂದಾದ ಪತಿ

**ವಿಶ್ವವಾಣಿ ಸುದ್ದಿಮನೆ** ಬಾಗಲಕೋಟೆ 1/12/20

ಜಿಲ್ಲೆಯ ಮಹಾಲಿಂಗಪುರದ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ವೇಳೆ ನಡೆದಿದ್ದ ತಳ್ಳಾಟದ ಸಮಯದಲ್ಲಿ ಗಾಯಗೊಂಡಿದ್ದ ಸದಸ್ಯೆಯೊಬ್ಬರಿಗೆ ಗರ್ಭಪಾತ ಆಗಿದೆ. ಜಿಲ್ಲಾ ಪಂಚಾಯಿ ಸದಸ್ಯೆ ಚಾಂದಿನಿ ನಾಯಕ್ ಅವರೇ ಈ ನತದೃಷ್ಟೆ.



ಪುರಸಭೆ ಸದಸ್ಯೆ ಚಾಂದಿನಿ ನಾಯಕ

ಹಲ್ಲೆಗೆ ಒಳಗಾಗಿದ್ದ ಮೂವರು ಮಹಿಳಾ ಸದಸ್ಯರ ಪೈಕಿ ಗಾಯಗೊಂಡಿದ್ದ ವಾರ್ಡ್ ಸಂಖ್ಯೆ 4ರ ಸದಸ್ಯೆ ಚಾಂದಿನಿ ನಾಯಕ್, ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೆ, ಈಗ ಗರ್ಭಪಾತವಾಗಿರುವುದು ವರದಿಯಾಗಿದೆ.

ಶಾಸಕ ಸಿದ್ದು ಸವದಿ ಅವರೇ ತಳ್ಳಾಟ ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂದು ಹೇಳಲಾಗಿತ್ತು. ಈ ಕುರಿತ ವಿಡಿಯೋ ಕೂಡ ವೈರಲ್ ಆಗಿತ್ತು. ಆದರೆ ಇದರಲ್ಲಿ ತಮ್ಮ ಪಾತ್ರ ಇಲ್ಲವೆಂದು ಶಾಸಕ ಸಿದ್ದು ಸವದಿ ಅನಂತರ ಸ್ಪಷ್ಟನೆ ನೀಡಿದ್ದರು.

ಚಾಂದಿನಿ ನಾಯಕ್ ಅವರಿಗೆ ಗರ್ಭಪಾತ ಆಗಿರುವ ಸುದ್ದಿ ತಿಳಿಯುತ್ತಿದ್ದಂತೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಕ್ಷಿತಾ ಈಟಿ ಅವರು, ಸಂತ್ರಸ್ತೆಯ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ನನ್ನ ಪತ್ನಿಯ ಗರ್ಭಪಾತಕ್ಕೆ ತಳ್ಳಾಟವೇ ಕಾರಣ. ಅಂದು ಅಮಾನವೀಯವಾಗಿ ವರ್ತಿಸಿದ್ದು ನನಗೆ ಅತೀವ ನೋವು ಉಂಟು ಮಾಡಿದ್ದು, ಈ ಕುರಿತಂತೆ ಮುಂದಿನ ದಿನಗಳಲ್ಲಿ ಕಾನೂನು ಹೋರಾಟ ಮಾಡುತ್ತೇನೆ ಎಂದು ಚಾಂದಿನಿ ನಾಯಕ್ ಪತಿ ನಾಗೇಶ ಹೇಳಿದ್ದಾರೆ.

**ಘಟನೆಯ ಹಿನ್ನೆಲೆ:** ನ. 9 ರಂದು ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಈ ವೇಳೆ ಆ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದ ಬಿಜೆಪಿಯ ಮೂವರು ಸದಸ್ಯೆಯರು, ತಮಗೆ ಅವಕಾಶ ಸಿಗದ ಕಾರಣ ಕಾಂಗ್ರೆಸ್‌ಗೆ ಬೆಂಬಲ ನೀಡಲು ಮುಂದಾಗಿದ್ದರು.

ಈ ವಿಷಯ ಗಮನಕ್ಕೆ ಬರುತ್ತಿದ್ದಂತೆಯೇ ತೇರದಾಳ ಶಾಸಕ ಸಿದ್ದು ಸವದಿ ಹಾಗೂ ಬೆಂಬಲಿಗರು ಬಿಜೆಪಿಯ ಸದಸ್ಯರಾದ ಗೋದಾವರಿ, ಚಾಂದಿನಿ ನಾಯಕ್ ಹಾಗೂ ಸವಿತಾ ಹುರಕಡ್ಲಿ ಅವರ ಮೇಲೆ ಹಲ್ಲೆಗೆ ಮುಂದಾಗಿದ್ದರು. ಎಳೆದಾಟದಲ್ಲಿ ಮೂವರು ಸದಸ್ಯೆಯರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು.



**ಶಾಸಕ ಸಿದ್ದು ಸವದಿ ಕುಮ್ಮಕ್ಕಿನಿಂದ ನಡೆದ ಅಮಾನವೀಯ ಘಟನೆಗೆ ಗರ್ಭಿಣಿ ಬೆಲೆ ತೆತ್ತಿದ್ದು ದುರದುಷ್ಟಕರ. ಮಹಿಳಾ ಜನಪ್ರತಿನಿಧಿಗಳಿಗೆ ಜಿಲ್ಲೆಯಲ್ಲಿ ರಕ್ಷಣೆ ಇಲ್ಲದಂತಾಗಿದೆ. ಘಟನೆಯನ್ನು ತನಿಖೆ ನಡೆಸಿ ಕ್ರಮಕ್ಕೆ ಮುಂದಾಗಬೇಕಿದೆ.**

**-ರಕ್ಷಿತಾ ಈಟಿ** ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ